# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ
**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD**
**Malleshwaram, Bengaluru – 560 003**

## 2024-25ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ -1
## S.S.L.C. MODEL QUESTION PAPER-1 : 2024-25

# ವಿಷಯ : ಸಮಾಜ ವಿಜ್ಞಾನ
# Subject : SOCIAL SCIENCE
**(ಕನ್ನಡ ಮಾಧ್ಯಮ / Kannada Medium)**

**ವಿಷಯ ಸಂಕೇತ : 85-K** **Subject Code : 85-K**

ಸಮಯ : 3 ಗಂಟೆ 15 ನಿಮಿಷಗಳು ] [ Time : 3 Hours 15 Minutes

ಗರಿಷ್ಠ ಅಂಕಗಳು : 80 ] [ Max. Marks : 80

---

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ಸೂಚಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವೂ ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[ Turn over

**I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ : 8 × 1 = 8**

1. ಪಂಜಾಬ್ ಪ್ರಾಂತ್ಯವನ್ನು ಬ್ರಿಟಿಷ್ ಸಾಮ್ರಾಜ್ಯದೊಂದಿಗೆ ವಿಲೀನಗೊಳಿಸಿದ ಗವರ್ನರ್ ಜನರಲ್

   (A) ವೆಲೆಸ್ಲಿ (B) ಡಾಲ್‌ಹೌಸಿ

   (C) ಕಾರ್ನ್‌ವಾಲಿಸ್ (D) ವಾರನ್ ಹೇಸ್ಟಿಂಗ್

2. 1935 ರ ಭಾರತ ಸರ್ಕಾರ ಶಾಸನವು ಭಾರತದ ಸಂವಿಧಾನ ರಚನೆಯ ತಳಹದಿ ಎಂದು ಪರಿಗಣಿಸಲ್ಪಟ್ಟಿದೆ ಏಕೆಂದರೆ ಅದು

   (A) ಒಕ್ಕೂಟ ವ್ಯವಸ್ಥೆಯನ್ನು ಜಾರಿಗೆ ತಂದಿತು

   (B) ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆಯನ್ನು ಜಾರಿಗೊಳಿಸಿತು

   (C) ಪಾಂತ್ಯಗಳಲ್ಲಿ ದ್ವಿಸರ್ಕಾರವನ್ನು ಜಾರಿಗೆ ತಂದಿತು

   (D) ಸ್ಥಳೀಯ ಸರ್ಕಾರವನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಆಶ್ವಾಸನೆ ನೀಡಿತು

3. ಇಂದು ಭಾರತ ವಿಶ್ವದಲ್ಲೇ ಐದನೇ ಬೃಹತ್ ಆರ್ಥಿಕ ಶಕ್ತಿಶಾಲಿ ದೇಶವಾಗಿ ಗುರುತಿಸಿಕೊಂಡಿರಲು ಕಾರಣವಾದ ಅಂಶ

   (A) ಅಲಿಪ್ತ ನೀತಿ

   (B) 1991 ರಲ್ಲಿ ಜಾರಿಗೆ ತಂದ ಜಾಗತೀಕರಣ ಮತ್ತು ಉದಾರೀಕರಣ ನೀತಿ

   (C) ನಿಶ್ಯಸ್ತ್ರೀಕರಣಕ್ಕೆ ಬೆಂಬಲ

   (D) ವರ್ಣಭೇದ ನೀತಿಗೆ ವಿರೋಧ

4. 1976 ರ ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆಯ ಪ್ರಕಾರ

(A) ಅಸ್ಪೃಶ್ಯತೆಯ ಆಚರಣೆಯು ಶಿಕ್ಷಾರ್ಹ ಅಪರಾಧವಾಗಿದೆ

(B) ಅಸ್ಪೃಶ್ಯತೆಯ ಪಾಲನೆಗೆ ವಿಶೇಷ ಜವಾಬ್ದಾರಿಯನ್ನು ರಾಜ್ಯ ಸರ್ಕಾರಗಳಿಗೆ ನೀಡಲಾಗಿದೆ

(C) ಸಾರ್ವತ್ರಿಕ ಮತದಾನದ ಹಕ್ಕುಗಳನ್ನು ಎಲ್ಲರಿಗೂ ನೀಡಲಾಗಿದೆ

(D) ಸಮಾನತೆಯ ಹಕ್ಕನ್ನು ದೇಶದ ಎಲ್ಲಾ ನಾಗರಿಕರಿಗೆ ನೀಡಲಾಗಿದೆ

5. ಎಂ.ಆರ್.ಪಿ.ಎಲ್. ( MRPL ) ವಿರುದ್ಧ ಚಳವಳಿಯನ್ನು ನಡೆಸಲು ಕಾರಣ

(A) ತೈಲ ಕಾರ್ಯಾಗಾರದಿಂದ ಬರುವ ರಾಸಾಯನಿಕ ತ್ಯಾಜ್ಯಗಳಿಂದ ಪರಿಸರ ರಕ್ಷಣೆ

(B) ಮರ ಕಡಿಯುವುದರ ವಿರುದ್ಧ ಚಳವಳಿ

(C) ಮಹಿಳೆಯರ ಶೋಷಣೆ ವಿರುದ್ಧ ಚಳವಳಿ

(D) ನರ್ಮದಾ ನದಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಾಣದ ವಿರುದ್ಧ

6. ಭಾರತದ ಭೌಗೋಳಿಕ ವಿಭಾಗಗಳಲ್ಲಿಯೇ ಅತಿ ದೊಡ್ಡದಾಗಿರುವುದು

(A) ಉತ್ತರದ ಮಹಾ ಮೈದಾನಗಳು

(B) ಪರ್ಯಾಯ ಪ್ರಸ್ಥಭೂಮಿ

(C) ಹಿಮಾಲಯ ಪರ್ವತಗಳು

(D) ಕರಾವಳಿ ಮೈದಾನಗಳು ಮತ್ತು ದ್ವೀಪಗಳು

[ Turn over

7. ದೇಶದ ಆದಾಯ ಮತ್ತು ಸಂಪತ್ತನ್ನು ಯಾವುದೇ ತಾರತಮ್ಯವಿಲ್ಲದೆ ಸಮಾಜದ ಎಲ್ಲಾ ಜನತೆಗೆ ಸಮಾನವಾಗಿ ಹಂಚುವುದು, ಇದು

(A) ಸಾಮಾಜಿಕ ನ್ಯಾಯ (B) ರಾಜಕೀಯ ನ್ಯಾಯ

(C) ಜಾತ್ಯಾತೀತ ನ್ಯಾಯ (D) ನ್ಯಾಯಾಂಗ ನ್ಯಾಯ

8. ಸುಹಾಸನು 68,000 ರೂ. ಮೌಲ್ಯದ ಎಲ್ಇಡಿ ಟಿವಿಯನ್ನು ಒಂದು ಅಂಗಡಿಯಿಂದ ಕೊಂಡಿರುತ್ತಾನೆ. ಅದು ವಾರೆಂಟಿಗೆ ಮುನ್ನವೇ ಹಾಳಾಗುತ್ತದೆ ಅಂಗಡಿಯ ಮಾಲೀಕನು ಸುಹಾಸನ ದೂರನ್ನು ಪರಿಗಣಿಸುವುದಿಲ್ಲ. ಈಗ ಸುಹಾಸನು ದೂರನ್ನು ಸಲ್ಲಿಸಬೇಕಾದದ್ದು

(A) ಜಿಲ್ಲಾ ಆಯೋಗ (B) ರಾಜ್ಯ ಆಯೋಗ

(C) ತಾಲೂಕು ಆಯೋಗ (D) ರಾಷ್ಟ್ರ ಆಯೋಗ

**II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 8 × 1 = 8**

9. ಸಹಾಯಕ ಸೈನ್ಯ ಪದ್ಧತಿಯಿಂದ ಬ್ರಿಟಿಷರಿಗೆ ತಮ್ಮ ಸೈನ್ಯದ ನಿರ್ವಹಣೆ ಸುಲಭವಾಯಿತು. ಹೇಗೆ ?

10. ಅಡಾಲ್ಫ್ ಹಿಟ್ಲರ್ ಕಂದು ಅಂಗಿದಳ ಸ್ಥಾಪಿಸಿದನು. ಏಕೆ ?

11. ಉಪ ಪ್ರಾದೇಶಿಕವಾದ ಬೆಳೆಯಲು ಪ್ರಮುಖ ಕಾರಣವೇನು ?

12. ಪೂರ್ವಾಗ್ರಹ ಎಂದರೇನು ?

13. ಇಪ್ಪತ್ತನೇ ಶತಮಾನದ ಅಚ್ಚರಿಯ ಲೋಹ ಎಂದು ಯಾವುದನ್ನು ಕರೆಯುತ್ತಾರೆ ?

14. ಪೆಟ್ರೋಲಿಯಂ ಅನ್ನು ದ್ರವರೂಪದ ಚಿನ್ನ ಎಂದು ಏಕೆ ಕರೆಯುತ್ತಾರೆ ?

15. ಪ್ರತ್ಯಕ್ಷ ತೆರಿಗೆಗೆ ಎರಡು ಉದಾಹರಣೆ ಕೊಡಿ.

16. ಉದ್ಯಮಿ ಎಂದರೆ ಯಾರು ?

**III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : $8 \times 2 = 16$**

17. ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಕೇಂದ್ರ ಸರ್ಕಾರ ಹೊಂದಿರುವ ಸಶಸ್ತ್ರ ಸೈನಿಕ ಪಡೆಗಳನ್ನು ತಿಳಿಸಿ.

**ಅಥವಾ**

ಭಯೋತ್ಪಾದನೆಯ ಸವಾಲುಗಳನ್ನು ಎದುರಿಸಲು ಭಾರತ ಕೈಗೊಂಡಿರುವ ಕ್ರಮಗಳನ್ನು ತಿಳಿಸಿ.

18. ವರದಕ್ಷಿಣೆ ಪಿಡುಗಿನಿಂದಾಗುವ ದುಷ್ಪರಿಣಾಮಗಳಾವುವು ?

**ಅಥವಾ**

ಬಾಲಕಾರ್ಮಿಕ ಪದ್ಧತಿಗೆ ಕಾರಣಗಳಾವುವು ?

19. ಶ್ರೀ ನಾರಾಯಣಗುರು ಧರ್ಮ ಪರಿಪಾಲನ ಯೋಗಮ್‌ನ ಕೊಡುಗೆಗಳೇನು ?

20. ಭಾಷಾವಾರು ಪ್ರಾಂತ್ಯವಾಗಿ ಆಂಧ್ರಪ್ರದೇಶದ ರಚನೆಯು ಭಾರತ ಸರ್ಕಾರಕ್ಕೆ ಅನಿವಾರ್ಯವಾಯಿತು. ಏಕೆ ?

21. ಅರಣ್ಯಗಳು ಮಾನವನ ಜೀವನದಲ್ಲಿ ಮಹತ್ತರ ಪಾತ್ರವಹಿಸುತ್ತವೆ. ವಿವರಿಸಿ.

22. ಭಾರತದ ಕೃಷಿಯು ಮಾನ್ಸೂನ್ ಮಾರುತದೊಂದಿಗೆ ಆಡುವ ಜೂಜಾಟವಾಗಿದೆ. ಈ ಹೇಳಿಕೆಯನ್ನು ಸಮರ್ಥಿಸಿ.

23. ಸಾರ್ವಜನಿಕ ಹಣಕಾಸಿನ ಮಹತ್ವವನ್ನು ಬರೆಯಿರಿ.

24. ಮಾರ್ಚ್ 15 ನ್ನು ವಿಶ್ವಗ್ರಾಹಕರ ದಿನವನ್ನಾಗಿ ಆಚರಿಸುತ್ತಾರೆ. ಏಕೆ ?

**IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 9 × 3 = 27**

25. ಸಾಮಾಜಿಕ ಸುಧಾರಣಾ ಚಳವಳಿ ಹಾಗೂ ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಆ್ಯನಿ ಬೆಸೆಂಟ್‌ರವರ ಪಾತ್ರವನ್ನು ವಿವರಿಸಿ.

**ಅಥವಾ**

ಸ್ವಾತಂತ್ರ್ಯ ಹೋರಾಟದಲ್ಲಿ ಬಾಲಗಂಗಾಧರ್ ತಿಲಕರ ಪಾತ್ರವನ್ನು ವಿವರಿಸಿ.

26. ಗ್ಲೋಬಲ್ ಪೊಸಿಶನ್ ಸಿಸ್ಟಮ್ ( GPS ) ನ ಉಪಯೋಗಗಳೇನು ?

**ಅಥವಾ**

ಚಂಡಮಾರುತದ ಪರಿಣಾಮಗಳೇನು ?

27. ಭಾರತವು ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಹೇಗೆ ಸರ್ವಾಂಗೀಣ ಅಭಿವೃದ್ಧಿ ಸಾಧಿಸಿತು ಎಂಬುದನ್ನು ಸಮರ್ಥಿಸಿ.

**ಅಥವಾ**

ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳ ಪಾತ್ರ ಬಹುಮುಖ್ಯ ಎಂಬುದನ್ನು ಸಮರ್ಥಿಸಿ.

28. ಬ್ಯಾಂಕ್ ಖಾತೆ ಹೊಂದಿರುವುದು ಅನುಕೂಲಕರ ಹೇಗೆ ?

**ಅಥವಾ**

ದೇಶದ ಅರ್ಥವ್ಯವಸ್ಥೆಯಲ್ಲಿ ಉದ್ಯಮಿಯು ಬಹು ಮುಖ್ಯಪಾತ್ರ ನಿರ್ವಹಿಸುತ್ತಾನೆ. ಹೇಗೆ ?

29. ಖಾಯಂ ಜಮೀನ್ದಾರಿ ಪದ್ಧತಿ ಮತ್ತು ರೈತವಾರಿ ಪದ್ಧತಿಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

30. "ಪ್ಲಾಸಿ ಕದನವು ಬ್ರಿಟಿಷರಿಗೆ ಭಾರತದಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸಲು ಮೊದಲ ಹೆಜ್ಜೆಯಾಯಿತು." ಈ ಹೇಳಿಕೆಯನ್ನು ಸ್ಪಷ್ಟೀಕರಿಸಿ.

31. "ಲಿಂಗತಾರತಮ್ಯವನ್ನು ನಿವಾರಣೆ ಮಾಡಲು ಭಾರತ ಸರ್ಕಾರ ಅನೇಕ ಕ್ರಮಗಳನ್ನು ಕೈಗೊಂಡಿದೆ." ಈ ಹೇಳಿಕೆಯನ್ನು ಸಮರ್ಥಿಸಿ.

32. ಸಂಘಟಿತ ವಲಯದ ಕೆಲಸಗಾರರು ಅಸಂಘಟಿತ ವಲಯದ ಕೆಲಸಗಾರರಿಗಿಂತ ಹೇಗೆ ಭಿನ್ನವಾಗಿದ್ದಾರೆ ?

33. ಮಣ್ಣಿನ ಸಂರಕ್ಷಣೆ ಅತ್ಯವಶ್ಯಕ. ಏಕೆ ?

**V. ಈ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : $4 \times 4 = 16$**

34. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣವಾದ ಆರ್ಥಿಕ ಮತ್ತು ಸೈನಿಕ ಕಾರಣಗಳನ್ನು ವಿವರಿಸಿ.

**ಅಥವಾ**

ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಬ್ರಿಟನ್ ಭಾರತದ ಸಂಪನ್ಮೂಲಗಳನ್ನು ಹೇಗೆ ಬಳಸಿಕೊಂಡಿತು ? ವಿವರಿಸಿ.

35. ಮಾದರಿ ಮೈಸೂರು ರಾಜ್ಯವನ್ನು ನಿರ್ಮಿಸುವಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ನೀಡಿದ ಕೊಡುಗೆಗಳನ್ನು ಬರೆಯಿರಿ.

36. ವಿಶ್ವಸಂಸ್ಥೆಯ ಸಾಧನೆಗಳನ್ನು ಪಟ್ಟಿ ಮಾಡಿ.

37. ಕೆಂಪು ಮಣ್ಣು ಕಪ್ಪು ಮಣ್ಣಿಗಿಂತ ಭಿನ್ನವಾಗಿದೆ. ಹೇಗೆ ?

**VI.** 38. **ನಿಮಗೆ ನೀಡಿರುವ ಭಾರತದ ನಕ್ಷೆಯಲ್ಲಿ ಕೆಳಗಿನವುಗಳಲ್ಲಿನ ಯಾವುದಾದರೂ 5 ನ್ನು ಗುರುತಿಸಿ :** **1 × 5 = 5**

a) ಲಾಲ್ ಬಹಾದ್ದೂರ್ ಶಾಸ್ತ್ರಿ ಜಲಾಶಯ

b) ಅಹಮದಾಬಾದ್

c) 82° 30′ ಪೂರ್ವ ರೇಖಾಂಶ

d) ವಿಶಾಖಪಟ್ಟಣಂ

e) ಭಾರತದ ಅತ್ಯಂತ ಹಳೆಯ ಬಂದರು

f) ಬರ್ನ್‌ಪುರ್

g) ಗುವಾಹಟಿ

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 38 ರ ಬದಲಿಗೆ)***

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಮುಖ್ಯ ಉದ್ದೇಶಗಳನ್ನು ತಿಳಿಸಿ. **5**